## ಕಣಾದದ ಆಜೀವ ಸದಸ್ಯತ್ವಕ್ಕೆ / ಕಣಾದವನ್ನು ಕೊಳ್ಳಲು ಬೇಡಿಕೆ ಪತ್ರ

**ಕಾರ್ಯದರ್ಶಿ**
**ಕನ್ನಡ ಸಾಂಸ್ಕೃತಿಕ ಸಂಘ**
**ಸಿ.ಎಸ್.ಐ.ಆರ್ – ರಾಷ್ಟ್ರೀಯ ವೈಮಾಂತರಿಕ್ಷ ಪ್ರಯೋಗಶಾಲೆಗಳು**
**ಎಚ್.ಎ.ಎಲ್. ವಿಮಾನ ನಿಲ್ದಾಣ ರಸ್ತೆ**
**ಅಂಚೆಪೆಟ್ಟಿಗೆ 1779, ಬೆಂಗಳೂರು – 560 017**

ಮಾನ್ಯರೇ,

೧. ನಾನು ನಿಮ್ಮ ಸಂಸ್ಥೆಯಿಂದ ಪ್ರಕಟಣೆಗೊಳ್ಳುವ ಕಣಾದ ಪತ್ರಿಕೆಯ ಆಜೀವ ಸದಸ್ಯನಾಗಲು ಬಯಸುತ್ತೇನೆ.
೨. ನಾನು / ನಮ್ಮ ಸಂಸ್ಥೆ ಕಣಾದದ _____ ಸಂಚಿಕೆಗಳ _________ ಪ್ರತಿಗಳನ್ನು ಕೊಳ್ಳಲು ಬಯಸುತ್ತೇವೆ.

ಆ ಪ್ರಯುಕ್ತ – – – – –ಮೊಬಲಗನ್ನು ಕಳುಹಿಸುತ್ತಿದ್ದೇವೆ.

ಇಂತಿ ನಿಮ್ಮವ

ಹಣ ಪಾವತಿಯ ವಿವರ ____________
ವಿಳಾಸ:

---

**ಸೂಚನೆ:**
೧. ಕಣಾದದ ಆಜೀವ ಚಂದಾ ೫೦೦ ರೂ ಮಾತ್ರ.
೨. ಕಣಾದದ ಬಿಡಿ ಪ್ರತಿಯ ಬೆಲೆ ೫೦ ರೂ. ಮಾತ್ರ
೩. ಚೆಕ್ ಮತ್ತು ಡಿಡಿಗಳನ್ನು ಸ್ವೀಕರಿಸಲಾಗುವುದು. ಇವುಗಳಲ್ಲಿ ಕಾರ್ಯದರ್ಶಿ, ಕನ್ನಡ ಸಾಂಸ್ಕೃತಿಕ ಸಂಘ ಎಂದು ನಮೂದಿಸಿ.

ತೆರೆದ ಅಂಚೆ

**ಡಾ ॥ ರಾ. ರಾಮಚಂದ್ರ ರಾವ್**
ವಿಜ್ಞಾನಿ, ವಸ್ತು ವಿಜ್ಞಾನ ವಿಭಾಗ
ಸಂಪಾದಕರು, **“ಕಣಾದ”**
ವೈ.ಔ.ಸಂ.ಮಂ. ರಾಷ್ಟ್ರೀಯ ವೈಮಾಂತರಿಕ್ಷ ಪ್ರಯೋಗಶಾಲೆಗಳು
ಅಂಚೆಪೆಟ್ಟಿಗೆ ೧೭೭೯, ಎಚ್.ಎ.ಎಲ್. ವಿಮಾನ ನಿಲ್ದಾಣ ರಸ್ತೆ,
ಬೆಂಗಳೂರು ೫೬೦೦೧೭
ದೂರವಾಣಿ – 080 – 25086178 / 6765 / 6698
09449087753

ಸಿರಿಗನ್ನಡಂ ಗೆಲ್ಗೆ

# ಕಣಾದ

## (ಕನ್ನಡ ವಾರ್ಷಿಕ ವಿಜ್ಞಾನ ಪತ್ರಿಕೆ)

## ಕನ್ನಡ ವಿಜ್ಞಾನ ಪ್ರಬಂಧ ಸ್ಪರ್ಧೆ – ೨೦೧೬

**ಕನ್ನಡ ಸಾಂಸ್ಕೃತಿಕ ಸಂಘ**
ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನಾ ಮಂಡಳಿ
ರಾಷ್ಟ್ರೀಯ ವೈಮಾಂತರಿಕ್ಷ ಪ್ರಯೋಗಶಾಲೆಗಳು
ಬೆಂಗಳೂರು – ೫೬೦೦೧೭

www.nal.res.in/kannada/

## ಪ್ರಕಟನೆಯ ಕೃಪೆಗಾಗಿ

## ಕಣಾದ

(ವಾರ್ಷಿಕ ವಿಜ್ಞಾನ ಪತ್ರಿಕೆ)

ವಿಜ್ಞಾನ ಪ್ರಬಂಧ ಸ್ಪರ್ಧೆ – ೨೦೧೬

ರಾಷ್ಟ್ರೀಯ ವೈಮಾಂತರಿಕ್ಷ ಪ್ರಯೋಗಶಾಲೆಗಳ ಕನ್ನಡ ಸಾಂಸ್ಕೃತಿಕ ಸಂಘವು ಪ್ರಕಟಿಸುತ್ತಿರುವ ಕಣಾದ ವಾರ್ಷಿಕ ವಿಜ್ಞಾನ ಪತ್ರಿಕೆಯ **೪೨ನೆಯ** ಸಂಚಿಕೆಗಾಗಿ ಕನ್ನಡ ವಿಜ್ಞಾನ ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ.

ಈ ಸ್ಪರ್ಧೆಯಲ್ಲಿ ಪ್ರೌಢಶಾಲೆ, ಕಾಲೇಜು ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಭಾಗವಹಿಸಬಹುದು. ಈ ಮೂರು ವಿಭಾಗಗಳಲ್ಲಿ ಪ್ರತ್ಯೇಕವಾಗಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದು ಆಯ್ಕೆಯಾಗುವ ಲೇಖನಗಳಿಗೆ ಕ್ರಮವಾಗಿ ೫೦೦ ಮತ್ತು ೩೦೦ ರೂಪಾಯಿಗಳ ಬಹುಮಾನಗಳಿವೆ.

ಬಹುಮಾನವನ್ನು ಪಡೆದ ಲೇಖನಗಳನ್ನೂ ಮತ್ತು ಮೆಚ್ಚುಗೆ ಪಡೆದ ಇತರ ಲೇಖನಗಳನ್ನೂ ಈ ವರ್ಷದ ಕಣಾದದಲ್ಲಿ ಪ್ರಕಟಿಸಲಾಗುವುದು. ಬಹುಮಾನಿತ ಲೇಖಕರಿಗೆ ನಮ್ಮ ಪ್ರಯೋಗಶಾಲೆಯಲ್ಲಿ ರಾಜ್ಯೋತ್ಸವವನ್ನು ಆಚರಿಸುವ ದಿನಾಂಕದಂದು ಬಹುಮಾನಗಳನ್ನು ವಿತರಿಸಲಾಗುವುದು.

**ಸ್ಪರ್ಧೆಗೆ ಲೇಖನಗಳನ್ನು ಕಳುಹಿಸಲು ಅಂತಿಮ ದಿನಾಂಕ**

**೩೧.೦೮.೨೦೧೬**

**ಲೇಖನಗಳನ್ನು ಕಳುಹಿಸಲು ಮತ್ತು ಇತರ ವಿವರಗಳಿಗಾಗಿ ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಿ:**

**ಡಾ॥ ರಾ. ರಾಮಚಂದ್ರ ರಾವ್, ವಿಜ್ಞಾನಿ,**
ವಸ್ತು ವಿಜ್ಞಾನ ವಿಭಾಗ, ಸಂಪಾದಕರು, “ಕಣಾದ”
ವೈಔಸಂಮಂ – ರಾಷ್ಟ್ರೀಯ ವೈಮಾಂತರಿಕ್ಷ ಪ್ರಯೋಗಶಾಲೆಗಳು
ಅಂಚೆಪೆಟ್ಟಿಗೆ 1779, ಬೆಂಗಳೂರು - 560 017
ದೂರವಾಣಿ **– 080 – 2508 6178 / 6765**
**– 09449087753**
ಶ್ರೀಮತಿ ಎಸ್.ಕ್ಷಮಾ – **2508 6698 / 9008866511**
ವಿ–ಅಂಚೆ: rrrao@nal.res.in or keditor@nal.res.in

## ಸ್ಪರ್ಧೆಯ ನಿಯಮಗಳು

೧. ಲೇಖನವು ಕನ್ನಡದಲ್ಲಿದ್ದು, ಸಾಮಾನ್ಯ ಓದುಗರನ್ನು ಉದ್ದೇಶಿಸಿರಬೇಕು.

೨. ಲೇಖನವು ೨೦೦೦ ದಿಂದ ೩೦೦೦ ಪದಗಳಿಗೆ ಸೀಮಿತವಾಗಿರಲಿ.

೩. ಸೂಕ್ತವಾದ ಚಿತ್ರ ಮತ್ತು ನಕ್ಷೆಗಳನ್ನು ಬಳಸಬೇಕು

೪. ಕಾಗದದ ಒಂದೇ ಮಗ್ಗುಲಲ್ಲಿ ಇರುವ ಅಂದವಾದ ಕೈಬರಹದ, ಅಥವಾ ಬೆರಳಚ್ಚಿಸಿದ ಲೇಖನಗಳನ್ನು ಸಂಪಾದಕರ ವಿಳಾಸಕ್ಕೆ ಕಳುಹಿಸಬೇಕು.

೫. ಗಣಕದಲ್ಲಿ ಕನ್ನಡದ ‘ನುಡಿ‘ ತಂತ್ರಾಂಶವನ್ನು ಬಳಸಿ ಕೀಲಿಸಿದ ಲೇಖನದ ಕಡತವನ್ನು “ಸಿ.ಡಿ.” ಅಥವಾ ವಿದ್ಯುನ್ಮಾನ ಅಂಚೆ (ಇ–ಮೇಲ್) ಮೂಲಕ ಕಳುಹಿಸಿದರೆ ಉತ್ತಮ.

೬. "ನುಡಿ" ತಂತ್ರಾಂಶವನ್ನು **www.kagapa.in** ಜಾಲತಾಣದಿಂದ ಡೌನ್‌ಲೋಡ್ ಮಾಡಿ ಅಥವಾ **kagapa@gmail.com** ಇವರಿಗೆ ವಿ–ಅಂಚೆ ಕಳುಹಿಸಿ ಪಡೆಯಬಹುದು.

೭. ಈಗಾಗಲೇ ಪ್ರಕಟವಾದ ಅಥವಾ ಭಾಷಾಂತರಗೊಂಡ ಲೇಖನಗಳನ್ನು ಕಳುಹಿಸಬಾರದು. ವಿವಿಧ ಮೂಲಗಳಿಂದ ವಿಷಯ ಸಾಮಗ್ರಿಗಳನ್ನು ಆಯ್ದುಕೊಂಡಿದ್ದರೆ, ಅದನ್ನು ಗ್ರಂಥಋಣದಲ್ಲಿ ಸೂಚಿಸಿರಬೇಕು.

೮. ವಿದ್ಯಾರ್ಥಿಗಳು ತಮ್ಮ ಶಾಲಾ–ಕಾಲೇಜುಗಳ ಮುಖ್ಯಸ್ಥರಿಂದ ಪಡೆದ ವಿದ್ಯಾರ್ಥಿ ಪ್ರಮಾಣಪತ್ರವನ್ನು (ದೂರವಾಣಿ ಸಂಖ್ಯೆಯೊಂದಿಗೆ) ಕಳುಹಿಸಬೇಕು.

೯. ಸಾರ್ವಜನಿಕರು ಲೇಖನದೊಂದಿಗೆ ತಮ್ಮ ಹೆಸರು, ವಿಳಾಸ, ದೂರವಾಣಿ ಸಂಖ್ಯೆ, ವಿ–ಅಂಚೆಗಳನ್ನು ತಪ್ಪದೇ ಬರೆದು ಕಳುಹಿಸಬೇಕು.

೧೦.ಬಹುಮಾನಿತ ಲೇಖನಗಳ ಹಕ್ಕನ್ನು ಕನ್ನಡ ಸಂಘವು ಕಾಯ್ದಿರಿಸಿಕೊಂಡಿದೆ.

೧೦. ಲೇಖನಗಳನ್ನು ಹಿಂದಿರುಗಿಸಲಾಗುವುದಿಲ್ಲ.

ವಿಜ್ಞಾನ ಮತ್ತು ತಂತ್ರಜ್ಞಾನದ ಕ್ಷೇತ್ರದಲ್ಲಿನ ಸಂಶೋಧನೆಗಳು, ಬೆಳವಣಿಗೆಗೆ ಸಂಬಂಧಪಟ್ಟ ಕೆಲವು ಸೂಕ್ತ ವಿಷಯಗಳನ್ನು ಇಲ್ಲಿ ನೀಡಲಾಗಿದೆ. ಈ ವಿಷಯಗಳಲ್ಲಿ ಒಂದನ್ನು ಆಯ್ಕೆಮಾಡಿ, ಅದನ್ನು ಕುರಿತು ಲೇಖನವನ್ನು ಬರೆಯಬೇಕು. ಚಿಕ್ಕ, ಚೊಕ್ಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ನಿರೀಕ್ಷಿಸಲಾಗಿದೆ.

*********************************************

**ವಿಜ್ಞಾನ ಪ್ರಬಂಧ ಸ್ಪರ್ಧೆಗೆ ವಿಷಯಗಳು**

**ಪ್ರೌಢಶಾಲಾ ವಿಭಾಗ :–**

**೧. ಬಾಹ್ಯಾಕಾಶ ಹಾಗೂ ಸಂಬಂಧಪಟ್ಟ ತಂತ್ರಜ್ಞಾನಗಳು**

**೨. ವಿಜ್ಞಾನ ಕ್ಷೇತ್ರದಲ್ಲಿನ ಮೂಲಭೂತ ಸಂಶೋಧನೆಗಳು ಹಾಗೂ ಆ ಕ್ಷೇತ್ರದಲ್ಲಿನ ಬೆಳವಣಿಗೆಗಳು (ಉದಾ: ಕ್ಷ–ಕಿರಣ, ಲೇಸರ್, ಆಂಟಿಬಯೋಟಿಕ್ಸ್, ಟೆಲಿಸ್ಕೋಪ್, ಟ್ರಾನ್ಸಿಸ್ಟರ್, ಮೊದಲಾದವುಗಳು)**

**೩. ಕೃಷಿ ವಿಜ್ಞಾನ ಹಾಗೂ ತಂತ್ರಜ್ಞಾನ**

**ಕಾಲೇಜು ವಿಭಾಗ :–**

**೧. ಪರಿಸರ ಸಂರಕ್ಷಣೆಗಾಗಿ ಹಸಿರು ತಂತ್ರಜ್ಞಾನಗಳು**

**೨. ಭವಿಷ್ಯತ್ತಿನಲ್ಲಿನ ವಿಮಾನ ಹಾಗೂ ವೈಮಾನಿಕ ತಂತ್ರಜ್ಞಾನಗಳು**

**೩. ಆಧುನಿಕ ಸಂಪರ್ಕ ಸಾಧನಗಳು: ಉಪಯೋಗಗಳು ಮತ್ತು ದುಷ್ಪರಿಣಾಮಗಳು**

**ಸಾರ್ವಜನಿಕ ವಿಭಾಗ :–**

**ವಿಜ್ಞಾನ ಹಾಗೂ ತಂತ್ರಜ್ಞಾನದ ಯಾವುದಾದರೂ ವಿಷಯ**

*********************************************

**ಕನ್ನಡ ಹಾಗೂ ವಿಜ್ಞಾನದ ಅಭಿಮಾನಿಗಳಲ್ಲಿ ವಿಜ್ಞಾಪನೆಗಳು**

ಮಾನ್ಯರೇ,

ರಾಷ್ಟ್ರೀಯ ವೈಮಾಂತರಿಕ್ಷ ಪ್ರಯೋಗಶಾಲೆಗಳ ಕನ್ನಡ ಸಾಂಸ್ಕೃತಿಕ ಸಂಘವು ಪ್ರಕಟಿಸುತ್ತಿರುವ ಕಣಾದ ವಾರ್ಷಿಕ ವಿಜ್ಞಾನ ಪತ್ರಿಕೆಯ ೪೨ನೆಯ ಸಂಚಿಕೆಗಾಗಿ ಏರ್ಪಡಿಸುತ್ತಿರುವ ಕನ್ನಡ ವಿಜ್ಞಾನ ಪ್ರಬಂಧ ಸ್ಪರ್ಧೆ ಕುರಿತ ಈ ಕರಪತ್ರವನ್ನು ನಿಮಗೆ ಕಳುಹಿಸಲಾಗಿದೆ.

ನೀವು/ನಿಮ್ಮ ಮಿತ್ರರು/ನಿಮ್ಮ ಸಂಸ್ಥೆಯ ವಿದ್ಯಾರ್ಥಿಗಳು/ ಸಹೋದ್ಯೋಗಿಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಬೇಕೆಂದು ಹಾಗೂ ನಿಮ್ಮ ಸಂಪರ್ಕದ ಎಲ್ಲ ಶಾಲಾ–ಕಾಲೇಜುಗಳಿಗೆ ಈ ಮಾಹಿತಿಯನ್ನು ದಯಮಾಡಿ ತಲುಪಿಸಬೇಕೆಂದು ಕೋರುತ್ತೇವೆ.

ಸಂಪಾದಕರು, ಕಣಾದ

(ಕನ್ನಡ ಸಾಂಸ್ಕೃತಿಕ ಸಂಘದ ಪರವಾಗಿ)